# ಗೋದ್ರೆಜ್ ಅಲ್‌ಪೈನ್ ವಸತಿ ಸಮುಚ್ಚಯ ಯೋಜನೆಗೆ ಚಾಲನೆ



ಫಿರೋಜ್‌ಷಾ ಗೋದ್ರೆಜ್ ಅವರು ನೂತನ ಯೋಜನೆಗೆ ಚಾಲನೆ ನೀಡಿದರು.

ಮಂಗಳೂರು, ಫೆ. 7: ಮುಂಬಯಿ ಮೂಲದ ರಿಯಲ್ ಎಸ್ಟೇಟ್ ಡೆವಲಪರ್ ಗೋದ್ರೆಜ್ ಪ್ರಾಪರ್ಟೀಸ್ ಲಿ. (ಜಿಪಿಎಲ್) ವತಿಯಿಂದ ಮಂಗಳೂರಿನ ಯೆಯ್ಯಾಡಿಯ ಏರ್‌ಪೋರ್ಟ್ ರಸ್ತೆಯ 4.5 ಎಕ್ರೆ ಪ್ರದೇಶದಲ್ಲಿ 'ಗೋದ್ರೆಜ್ ಅಲ್‌ಪೈನ್' ಎಂಬ ಪ್ರೀಮಿಯಂ ವಸತಿ ಸಮುಚ್ಚಯ ನಿರ್ಮಾಣಕ್ಕೆ ಮಂಗಳವಾರ ಜಿಪಿಎಲ್ ಕಾರ್ಯನಿರ್ವಾಹಕ ನಿರ್ದೇಶಕ ಫಿರೋಜ್‌ಷಾ ಗೋದ್ರೆಜ್ ಚಾಲನೆ ನೀಡಿದರು.

ಈ ವಿಶೇಷ ವಸತಿ ಯೋಜನೆಯು ತಲಾ 19 ಮಹಡಿಗಳ ಅತ್ಯಾಕರ್ಷಕ ಮೂರು ಗೋಪುರಗಳನ್ನು ಹೊಂದಿದೆ. 449 ಆಧುನಿಕ ಅಪಾರ್ಟ್‌ಮೆಂಟ್‌ಗಳನ್ನು ಒಳಗೊಂಡಿದೆ. ಗ್ರಾಹಕರು 2, 2.5 ಮತ್ತು 3 ಬೆಡ್ ರೂಂಗಳ ಅಪಾರ್ಟ್‌ಮೆಂಟ್‌ಗಳನ್ನು, 1,203 ಚದರ ಅಡಿಯಿಂದ 1,695 ಚದರ ಅಡಿಯ ಶ್ರೇಣಿಯಲ್ಲಿ ಪಡೆಯಬಹುದು. ಪೆಂಟ್ ಹೌಸ್‌ಗಳನ್ನು 2,700 ಚದರ ಅಡಿಯಿಂದ 3,500 ಚದರ ಅಡಿ ವ್ಯಾಪ್ತಿಯಲ್ಲಿ ಪಡೆಯಬಹುದು ಎಂದು ಫಿರೋಜ್‌ಷಾ ವಿವರಿಸಿದರು.

ಉದ್ದೇಶಿತ ನೂತನ ವಸತಿ ಸಮುಚ್ಚಯ ವಿಶ್ವದರ್ಜೆಯ ಸೌಲಭ್ಯಗಳು ಹಾಗೂ ಸಮಕಾಲೀನ ವಿನ್ಯಾಸಗಳನ್ನು ಒಳಗೊಳ್ಳಲಿದೆ. ಉನ್ನತ ಗುಣಮಟ್ಟದ ಮನೋರಂಜನಾ ಸೌಲಭ್ಯಗಳು, ಟೆನ್ನಿಸ್ ಕೋರ್ಟ್, ಬ್ಯಾಡ್ಮಿಂಟನ್ ಕೋರ್ಟ್, ಬಿಲಿಯರ್ಡ್ಸ್ ಕೊಠಡಿ, ಕೇರಂ ಮತ್ತು ಟೇಬಲ್ ಟೆನ್ನಿಸ್ ಕೊಠಡಿ, ಸುಸಜ್ಜಿತ ಜಿಮ್ನಾಶಿಯಂ, ಹೆಲ್ತ್ ಕ್ಲಬ್, ಈಜುಕೊಳ, ಅತಿಥಿಗಳಿಗೆ ಸರ್ವೀಸ್ ಅಪಾರ್ಟ್‌ಮೆಂಟ್, ಬಹುಪಯೋಗಿ ಪಾರ್ಟಿ ಹಾಲ್‌ಗಳನ್ನು ಯೋಜನೆ ಒಳಗೊಂಡಿದೆ.

ನಗರದ ಹೃದಯ ಭಾಗದಲ್ಲಿರುವ 'ಗೋದ್ರೆಜ್ ಅಲ್‌ಪೈನ್' ನಗರ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ನೇರ ಸಂಪರ್ಕವನ್ನು ಹೊಂದಿದೆ. ಸಮೀಪದಲ್ಲಿರುವ ಬೆಟ್ಟಗಳು, ಉದ್ಯಾನವನ ಈ ಪರಿಸರಕ್ಕೆ ಪ್ರಕೃತಿ ಸಹಜ ಸೌಂದರ್ಯ ಹಾಗೂ ಆರೋಗ್ಯಕ್ಕೆ ಪೂರಕ ವಾತಾವರಣವನ್ನು ಒದಗಿಸಿದೆ. ಜಿಪಿಎಲ್ ಯೋಜನೆಯಲ್ಲಿ ಅನೇಕ ಪರಿಸರ ಸ್ನೇಹಿ ಉಪಕ್ರಮಗಳನ್ನು ಅಳವಡಿಸಲಾಗಿದೆ. ಯೋಜನೆಯಲ್ಲಿ ಶೇ. 80ರಷ್ಟು ಮುಕ್ತ ಜಾಗವನ್ನು ಒದಗಿಸಲಾಗಿದೆ. ಪ್ರಮುಖ ನಿರ್ಮಾಣ ಸಂಸ್ಥೆ ಲಾರ್ಸನ್ ಆ್ಯಂಡ್ ಟಬ್ರೊ ನೂತನ ಸಮುಚ್ಚಯದ ನಿರ್ಮಾಣದ ಜವಾಬ್ದಾರಿ ಹೊಂದಿದೆ. ಜಿಪಿಎಲ್, ಬಿ.ಎಂ. ಫಾರೂಕ್ ಜತೆ ಯೋಜನೆಗಳ ಅಭಿವೃದ್ಧಿಗೆ ಸಂಬಂಧಿಸಿ ಒಪ್ಪಂದ ಮಾಡಿಕೊಂಡಿದೆ ಎಂದು ತಿಳಿಸಿದರು.

ಫಿಜಾ ಡೆವೆಲಪರ್ಸ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿ. ಆಡಳಿತ ನಿರ್ದೇಶಕ ಬಿ.ಎಂ. ಫಾರೂಕ್ ಸಭಾಧ್ಯಕ್ಷತೆ ವಹಿಸಿದ್ದರು.

ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಮಂಗಳೂರು ನಗರದ ಆವಶ್ಯಕತೆಗೆ ತಕ್ಕಂತೆ ಜಾಗತಿಕ ಗುಣಮಟ್ಟದ ಖಾತರಿಯೊಂದಿಗೆ ಪ್ರಸ್ತಾವಿತ ಹೊಸ ಯೋಜನೆ ರೂಪುಗೊಳ್ಳಲಿದೆ ಎಂದವರು ತಿಳಿಸಿದರು.

ಜಿಪಿಎಲ್ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಟಿ. ಜಿತೇಂದ್ರನ್, ವೈಸ್ ಪ್ರೆಸಿಡೆಂಟ್ (ದಕ್ಷಿಣ) ಶ್ರೀರಾಮ್ ಅಯ್ಯರ್, ಫಿಝಾ ಗ್ರೂಪಿನ ಬಿ.ಎ. ಮೊಯಿದಿನ್ ಬಾವಾ ಉಪಸ್ಥಿತರಿದ್ದರು.

## ಸಂಸ್ಥೆಯ ಬಗ್ಗೆ...

1990ರಲ್ಲಿ ಸ್ಥಾಪನೆಯಾದ ಗೋದ್ರೆಜ್ ಪ್ರಾಪರ್ಟೀಸ್ ಲಿ. ರಿಯಲ್ ಎಸ್ಟೇಟ್ ಉದ್ಯಮದಲ್ಲಿ ನಾವೀನ್ಯತೆ ಮತ್ತು ಘನತೆಗೆ ಹೆಸರಾದ ಸಂಸ್ಥೆಯಾಗಿದೆ. ಹಲವಾರು ಮಹತ್ವದ ಯೋಜನೆಗಳನ್ನು ಪೂರ್ಣಗೊಳಿಸಿರುವ ಜಿಪಿಎಲ್ ಪ್ರಸ್ತುತ ಭಾರತದ 12 ನಗರಗಳಲ್ಲಿ ಕಾರ್ಯಾಚರಿಸುತ್ತಿದೆ.

ಮುಂಬಯಿ ಷೇರು ವಿನಿಮಯ ಕೇಂದ್ರ (ಬಿಎಸ್‌ಇ) ಮತ್ತು ರಾಷ್ಟ್ರೀಯ ಷೇರು ಮಾರುಕಟ್ಟೆಯಲ್ಲಿ (ಎನ್‌ಎಸ್‌ಇ) ನೋಂದಣಿಯಾಗಿದೆ. ಜೀ ಬಿಸಿನೆಸ್- ಆರ್‌ಐಸಿಎಸ್ ರಿಲಯಲ್ ಎಸ್ಟೇಟ್ ಅವಾರ್ಡ್ಸ್‌ನಲ್ಲಿ ಬೆಸ್ಟ್ ಎಮರ್ಜಿಂಗ್ ನ್ಯಾಶನಲ್ ಡೆವಲಪರ್ ಪ್ರಶಸ್ತಿ ಗಳಿಸಿದೆ. ಇಂಡಿಯಾದ ಬೆಸ್ಟ್ ಕಂಪೆನೀಸ್ ಟು ವರ್ಕ್ ಫಾರ್ ಸಮೀಕ್ಷೆಯಲ್ಲಿ ಸತತ ಮೂರು ವರ್ಷ ಪ್ರಥಮ ಸ್ಥಾನ ಪಡೆದ ಸಾಧನೆಗೆ ಪಾತ್ರವಾಗಿದೆ. ದಿ ಎಕನಾಮಿಕ್ ಟೈಮ್ಸ್ ಮತ್ತು ದಿ ಗ್ರೇಟ್ ಪ್ಲೇಸ್ ಟು ವರ್ಕ್ ಇನ್‌ಸ್ಟಿಟ್ಯೂಟ್ ಸಂಸ್ಥೆಗಳು ಈ ಸಮೀಕ್ಷೆಯನ್ನು ನಡೆಸಿದ್ದವು. ಜಿಪಿಎಲ್ ಇಂಡಿಯಾಸ್ ಟಾಪ್ 10 ಬಿಲ್ಡರ್ಸ್ ಪ್ರಶಸ್ತಿಯನ್ನು 6 ವರ್ಷ ಸತತವಾಗಿ ಕನ್‌ಸ್ಟ್ರಕ್ಷನ್ ವರ್ಲ್ಡ್ ನಿಯತಕಾಲಿಕೆಯಿಂದ ಪಡೆದಿದೆ.